## ಸಂಪಾದಕೀಯ

### ಜೀವನದ ಅರ್ಥಹೀನತೆ

# ಕಾತರತೆಯ ಯುಗ

ಆಧುನಿಕ ಕಾಲವನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಯಂತ್ರಯುಗ, ಪರಮಾಣುಯುಗ, ವಿಜ್ಞಾನ ಯುಗ, ಕಂಪ್ಯೂಟರ್ ಯುಗ, ವಾಣಿಜ್ಯಯುಗ, ಗ್ರಾಹಕಯುಗ—ಹೀಗೆ ನಾನಾ ಹೆಸರುಗಳು ಈ ಯುಗಕ್ಕೆ ಅನ್ವಯವಾಗುತ್ತವೆ. ಮನಶ್ಶಾಸ್ತ್ರಜ್ಞರು ಈ ಯುಗವನ್ನು **'ಕಾತರತೆಯ ಯುಗ'** (*Age of anxiety*) ಎಂದು ಕರೆಯುತ್ತಾರೆ. ಇದು ಮನುಷ್ಯನ ನಿಜವಾದ ಪ್ರಸ್ತುತ ಸ್ಥಿತಿಯನ್ನು ನಿರ್ದೇಶಿಸುತ್ತದೆ. ಮನುಷ್ಯನು ಹಿಂದೆಂದೂ ಇಷ್ಟೊಂದು ಕಾತರತೆಯ ಸ್ಥಿತಿಯಲ್ಲಿ ಇರಲಿಲ್ಲವೆಂಬುದು ಅವರ ಅಭಿಪ್ರಾಯ. ಈ ಕಾತರತೆಗೆ ಮುಖ್ಯ ಕಾರಣವೇನು? ಜೀವನದ ಶೂನ್ಯತೆ ಮತ್ತು ಅರ್ಥಹೀನತೆ. ಒಂದು ವಸ್ತುವು ತನ್ನ ಅರ್ಥವನ್ನು ಕಳೆದುಕೊಂಡರೆ ಅದು ಇಲ್ಲದಂತೆಯೇ. ಹಾಗೆಯೇ ಜೀವನವು ಅರ್ಥಹೀನವಾದರೆ ಅದು ಇಲ್ಲದಂತೆಯೇ ಅನುಭವವಾಗುತ್ತದೆ. ಅರ್ಥಹೀನತೆಯಿಂದುಂಟಾಗುವ ಇಲ್ಲದಿರುವಿಕೆ ವ್ಯಕ್ತಿಯನ್ನು ಕಾತರನನ್ನಾಗಿ ಮಾಡುತ್ತದೆ. ಯಾರೂ ತಮ್ಮ ಇಲ್ಲದಿರುವಿಕೆಯನ್ನು ಸಹಿಸಲಾರರು. ಒಂದು ಗುಂಪಿನಲ್ಲಿ ಒಬ್ಬ ವ್ಯಕ್ತಿಯ ಇರುವಿಕೆಗೆ ಗಮನವನ್ನೇ ಕೊಡದಿದ್ದಾಗ ಅವನಿಗದನ್ನು ಸಹಿಸಲಾಗುವುದಿಲ್ಲ. ಯಾರೂ ನಗಣ್ಯರಾಗಿರಲು ಇಷ್ಟಪಡುವುದಿಲ್ಲ (Nobody wants to be *nobody*). ತನ್ನ ಇರುವಿಕೆಯೇ ಅರ್ಥವನ್ನು ಕಳೆದುಕೊಳ್ಳುವಂತಾದರೆ ಆ ಇಲ್ಲದಿರುವಿಕೆ ವ್ಯಕ್ತಿಯಲ್ಲಿ ಕಾತರತೆಯನ್ನು ಉಂಟುಮಾಡುವುದು ಸಹಜ. ಇದು ಒಂದು ರೀತಿಯಲ್ಲಿ ಸಾವಿನಂತೆಯೇ. ಸಾವಿನ ನಂತರದ ಇಲ್ಲದಿರುವಿಕೆ ಅಥವಾ ಅಭಾವ ಪ್ರಜ್ಞೆ ಮೃತ್ಯುಭಯವನ್ನು ಹುಟ್ಟಿಸುತ್ತದೆ. ಮೃತ್ಯುಭಯವನ್ನು ಹೋಗಲಾಡಿಸಬಹುದಾದರೂ ಅಭಾವ ಪ್ರಜ್ಞೆಯಿಂದುಂಟಾಗುವ ಕಾತರತೆ ಹೋಗುವುದಿಲ್ಲ. ಇದರಂತೆಯೇ ಆಧುನಿಕ ಮಾನವನು ಅರ್ಥಹೀನತೆಯಿಂದುಂಟಾಗುವ ಅಭಾವ ಪ್ರಜ್ಞೆಯ ಕಾತರತೆಯಿಂದ ನರಳುತ್ತಿದ್ದಾನೆ. ಇದು ಆಧುನಿಕ ಕಾಲದಲ್ಲಿ ಅತ್ಯಂತ ತೀವ್ರವಾಗಿರುವುದರಿಂದ ಈ ಕಾಲವನ್ನು **'ಕಾತರತೆಯ ಯುಗ'** ಎಂದು ಕರೆಯಲಾಗಿದೆ.

> **ಏನು ಜೀವನದರ್ಥ? ಏನು ಪ್ರಪಂಚಾರ್ಥ?**
> **ಏನು ಜೀವ ಪ್ರಪಂಚಗಳ ಸಂಬಂಧ?**
> **ಕಾಣದಿಲ್ಲಿರ್ಪುದೇನಾನುಮುಂಟೇ? ಅದೇನು?**
> **ಜ್ಞಾನ ಪ್ರಮಾಣವೇಂ? —ಮಂಕುತಿಮ್ಮ**

### ಭೌತ ಮತ್ತು ವ್ಯಕ್ತಿನಿಷ್ಠ ಕಾತರತೆ

ಈ ಅರ್ಥಹೀನತೆಗೆ ಕಾರಣವೇನು? ಆದಿ ಮಾನವನ ಜೀವನ ತನ್ನ ಭೌತಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿತ್ತು. ಆದ್ದರಿಂದ ಅವನ ಕಾತರತೆಯೂ ಭೌತಿಕ ಅಭಾವದ ಮಿತಿಯೊಳಗಿತ್ತು ಎನ್ನಬಹುದು. ಯಾವಾಗ ಸಾವು ಬರುತ್ತದೊ, ಹಸಿವಿನಿಂದ ನರಳಬೇಕಾಗುತ್ತದೊ ಎಂಬ ಕಾತರತೆ ಅವನನ್ನು ಕಾಡಿಸುತ್ತಿದ್ದಿರಬಹುದು. ಮುಂದೆ ನಾಗರಿಕತೆ ಬೆಳೆದಂತೆಲ್ಲ ಈ ಭೌತನಿಷ್ಠ ಕಾತರತೆಯು ವ್ಯಕ್ತಿನಿಷ್ಠ ಕಾತರತೆಯಾಗಿ ಪರಿಣಮಿಸಿತು. ಇದು ಹೇಗೆಂಬುದನ್ನು ಈಗ ನೋಡೋಣ. ನಾಗರಿಕತೆಯ ಅಭಿವೃದ್ಧಿಯಾದಂತೆಲ್ಲ ಸಮಾಜವು ಬೇರೆ ಬೇರೆ ವರ್ಗಗಳಾಗಿ ವಿಭಾಗಗೊಂಡಿತು. ಬ್ರಾಹ್ಮಣ, ಕ್ಷತ್ರಿಯ ಮುಂತಾದ ಜಾತಿಗೆ ಸಂಬಂಧಪಟ್ಟ ವರ್ಗಗಳು, ಶೈವ, ವೈಷ್ಣವ ಮುಂತಾದ ಮತೀಯ ವರ್ಗಗಳು, ಚಮ್ಮಾರ, ಬಡಗಿ ಮುಂತಾದ ಔದ್ಯೋಗಿಕ ವರ್ಗಗಳು—ಹೀಗೆ ಹಲವು ವರ್ಗಗಳಾಗಿ ವಿಭಾಗಗೊಂಡಿತು. ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ವರ್ಗಕ್ಕೆ ಸೇರಿರುತ್ತಿದ್ದನು. ಅವನು ಆಯಾಯ ವರ್ಗದ ನೀತಿ ನಿಯಮಗಳು, ಸಾಮಾಜಿಕ ಕಟ್ಟಳೆಗಳು ಇತ್ಯಾದಿಗಳಿಗೆ ಅನುಸಾರವಾಗಿ ಜೀವನ ನಡೆಸಬೇಕಾಗುತ್ತಿತ್ತು. ಅವುಗಳನ್ನು ಉಲ್ಲಂಘಿಸಿದರೆ ಅವನು ಜಾತಿಭ್ರಷ್ಟನೂ, ಮತಭ್ರಷ್ಟನೂ, ದೇಶಭ್ರಷ್ಟನೂ, ಸಮಾಜಭ್ರಷ್ಟನೂ ಆಗುತ್ತಿದ್ದ.

ಇದಲ್ಲದೆ ಧರ್ಮಭೀತಿಯಿತ್ತು. ಕೆಟ್ಟ ನಡತೆಯಿಂದ ಈ ಜನ್ಮದಲ್ಲೋ ಮುಂದಿನ ಜನ್ಮದಲ್ಲೋ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಅಥವಾ ನರಕಕ್ಕೆ ಹೋಗಬೇಕಾಗುತ್ತದೆ ಎಂಬ ಭಯ ಇತ್ತು. ಹಿಂದೆ ಜಾತಿ ಮುಂತಾದ ಭ್ರಷ್ಟತೆಗಳು ದೊಡ್ಡ ಶಿಕ್ಷೆಯಾಗಿದ್ದವು. ವ್ಯಕ್ತಿಯು ಈ ರೀತಿ ಭ್ರಷ್ಟನಾಗುವುದೆಂದರೆ ವ್ಯಕ್ತಿಯಾಗಿ ತನ್ನ ಅರ್ಥವನ್ನೇ ಕಳೆದುಕೊಂಡಂತಾಗುತ್ತಿತ್ತು. ಅವನ ಜೀವನೋಪಾಯಕ್ಕೆ ಯಾವ ಕೊರತೆಯೂ ಇಲ್ಲದಿದ್ದರೂ ತಾನು ಭ್ರಷ್ಟನಾಗಿ ಜೀವಿಸುವುದು ಅತ್ಯಂತ ದುಃಖದಾಯಕವಾಗಿರುತ್ತಿತ್ತು. ವರ್ಗೀಯ ಭ್ರಷ್ಟತೆ, ನೈತಿಕ ಭ್ರಷ್ಟತೆ ಅವನನ್ನು ಕಾತರನನ್ನಾಗಿ ಮಾಡುತ್ತಿದ್ದವು. ಹೀಗೆ ಹಿಂದಿನ ಭೌತನಿಷ್ಠ ಕಾತರತೆ ಈಗ ವ್ಯಕ್ತಿನಿಷ್ಠ ಕಾತರತೆಯಾಗಿ ಪರಿಣಮಿಸಿತು.

### ಆತ್ಮನಿಷ್ಠ ಕಾತರತೆ

ಆಧುನಿಕ ನಾಗರಿಕತೆಯೊಂದಿಗೆ ಹಿಂದಿನ ವರ್ಗೀಕೃತ ಸಮಾಜ ಒಡೆಯತೊಡಗಿತು. ಜಾತಿಯ ಬಂಧನಗಳು ಸಡಿಲವಾದವು, ಎಲ್ಲರೂ ಎಲ್ಲ ಉದ್ಯೋಗಗಳನ್ನೂ ಮಾಡತೊಡಗಿದರು, ಮತೀಯ ಕಟ್ಟುಗಳೂ ಕಳಚಿಕೊಂಡವು. ವ್ಯಕ್ತಿಯು ಎಲ್ಲ ವರ್ಗಗಳಿಂದಲೂ ಮುಕ್ತನಾಗತೊಡಗಿದ. ಅವನು ಒಂದು ವರ್ಗದೊಳಗಿರುವಾಗ ಇದ್ದ ರಕ್ಷಣೆಯೂ ಈಗ ಇಲ್ಲವಾಯಿತು. ಅವನು ಒಂದು

ವರ್ಗದಲ್ಲಿದ್ದಾಗ ಅದರ ಮೂಲಕ ತನ್ನ ವ್ಯಕ್ತಿತ್ವಕ್ಕೆ ಒಂದು ಅರ್ಥವನ್ನು ಕಾಣುತ್ತಿದ್ದ. ಈಗ ಆ ಅರ್ಥ ಹೊರಟುಹೋಯಿತು. ಈಗ ಅವನು ಎಲ್ಲ ನೀತಿ ನಿಯಮಾವಳಿಗಳಿಂದಲೂ, ಎಲ್ಲ ವರ್ಗೀಯ ಕಟ್ಟಳೆಗಳಿಂದಲೂ ಮುಕ್ತನಾಗಿದ್ದಾನೆ. ಪಾಪಭೀತಿ ದೂರ ವಾಯಿತು. ಅವನ ನೈತಿಕ ಜೀವನದ ತಳಹದಿ ಕುಸಿದುಹೋಯಿತು. ಅಂತಃಪ್ರೇರಣೆಯ ತಳಹದಿಯ ಮೇಲೆ ಹೊಸ ನೈತಿಕ ಜೀವನವನ್ನು ನಿರ್ಮಿಸುವಷ್ಟು ವೈಯಕ್ತಿಕ ಬೆಳವಣಿಗೆ ಅವನಲ್ಲಿ ಇನ್ನೂ ಉಂಟಾಗಿಲ್ಲ. ಹೀಗೆ ಅವನೊಂದು ಅತಂತ್ರ ಸ್ಥಿತಿಯಲ್ಲಿದ್ದಾನೆ. ಎಲ್ಲ ವರ್ಗಗಳಿಂದಲೂ ಸ್ವತಂತ್ರನಾಗಿದ್ದರೂ ಆ ಸ್ವಾತಂತ್ರ್ಯದ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳುವ ಮತ್ತು ಅದರ ಸುಖವನ್ನು ಅನುಭವಿಸುವ ಸಾಮರ್ಥ್ಯ ಅವನಿಗೆ ಇಲ್ಲವಾಗಿದೆ. ಇಂತಹ ಪರಿಸ್ಥಿತಿಯಿಂದಾಗಿ ಅವನು ಜೀವನದಲ್ಲಿ ಶೂನ್ಯತೆಯನ್ನೂ ಅರ್ಥ ಹೀನತೆಯನ್ನೂ ಕಾಣುತ್ತಿದ್ದಾನೆ.

> ಒಬ್ಬನು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಬಹುದು. ಆದರೆ ಅವನು ತನ್ನ ಭಾವೋದ್ರೇಕಗಳಿಗೆ ಮತ್ತು ಆಸೆಗಳಿಗೆ ದಾಸನಾಗಿದ್ದರೆ, ಸ್ವಾತಂತ್ರ್ಯದ ಪವಿತ್ರ ಆನಂದವನ್ನು ಅನುಭವಿಸಲಾರ.
> ಸ್ವಾಮಿ ವಿವೇಕಾನಂದ

ಈ ಅರ್ಥಹೀನತೆ ಆತ್ಮನಿಷ್ಠ ವಾದುದು, ಏಕೆಂದರೆ ಅವನು ತನ್ನ ಇರುವಿಕೆಗೇ ಯಾವ ಅರ್ಥವನ್ನೂ ಕಾಣುತ್ತಿಲ್ಲ. ಇದು ಹಿಂದಿನ ಎಲ್ಲ ಕಾತರತೆಗಿಂತಲೂ ಅತ್ಯಂತ ತೀವ್ರವಾದುದು. ಆದಿಮಾನವನ ಭೌತಿಕ ಆವಶ್ಯಕತೆಗಳು ಪೂರ್ತಿಯಾದರೆ ಅವನ ಕಾತರತೆ ಕಡಮೆಯಾಗುತ್ತಿತ್ತು. ಮಧ್ಯಯುಗದಲ್ಲಿದ್ದ ವ್ಯಕ್ತಿ-ನಿಷ್ಠ ಕಾತರತೆಯ ವ್ಯಾಪ್ತಿ ಅತ್ಯಂತ ಸೀಮಿತವಾಗಿತ್ತು ಎನ್ನಬಹುದು, ಹಾಗೂ ಒಂದು ವರ್ಗದಲ್ಲಿ ಅಲ್ಲದಿದ್ದರೆ ಇನ್ನೊಂದು ವರ್ಗದಲ್ಲಿ ಅವನು ತನ್ನ ಅರ್ಥವನ್ನು ಕಂಡುಕೊಳ್ಳಬಹುದಾಗಿತ್ತು. ಆದರೆ ಈಗಿನ ಅರ್ಥಹೀನತೆ ತುಂಬ ವ್ಯಾಪ್ತಿಯುಳ್ಳದ್ದು, ಹಾಗೂ ಇದು ಮನುಷ್ಯನ ಅಸ್ತಿತ್ವವನ್ನೇ ಪ್ರಶ್ನಿಸುವಂತಹುದು.

## ಯಂತ್ರೀಕರಣ

ಈ ಅರ್ಥಹೀನತೆಗೆ ಇನ್ನೊಂದು ಮುಖ್ಯಕಾರಣ ಯಂತ್ರೀಕರಣ. ಹಿಂದೆ ಮಾನವನು ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುತ್ತಿದ್ದ. ತನ್ನ ಆಹಾರವನ್ನು ತಾನೇ ಬೆಳೆಯುತ್ತಿದ್ದ, ತನ್ನ ಬಟ್ಟೆಯನ್ನು ತಾನೇ ಹೊಲಿದುಕೊಳ್ಳುತ್ತಿದ್ದ, ಅದನ್ನು ತಾನೇ ಶುಚಿಗೊಳಿಸುತ್ತಿದ್ದ. ಎಲ್ಲೆಡೆಗೂ ನಡೆದುಕೊಂಡು ಹೋಗುತ್ತಿದ್ದ, ಪುಸ್ತಕಗಳನ್ನು ಬರೆದು ಅನೇಕ ಪ್ರತಿಗಳನ್ನು ತಾನೇ ಮಾಡುತ್ತಿದ್ದ—ಹೀಗೆ ಅವನು ಎಲ್ಲ ರೀತಿಯಲ್ಲಿಯೂ ಸ್ವಾವಲಂಬಿಯಾಗಿದ್ದ. ಈಗ ಅವನ ಎಲ್ಲ ಕೆಲಸಗಳನ್ನೂ ಯಂತ್ರಗಳು ಮಾಡುತ್ತಿವೆ. ಅವು ಅವನಿಗೆ ಬಟ್ಟೆಯನ್ನು ತಯಾರಿಸಿಕೊಡುವುದು ಮಾತ್ರವಲ್ಲದೆ ಶುಚಿಗೊಳಿಸಿಕೊಡುತ್ತವೆ, ಆಹಾರಪದಾರ್ಥಗಳನ್ನೂ ತಯಾರಿಸಿ ಕೊಡುತ್ತವೆ; ಅವನನ್ನು, ಸ್ವರ್ಗಕ್ಕೆ (ಅದಿದ್ದರೆ) ಒಂದನ್ನು ಬಿಟ್ಟು, ಎಲ್ಲಿಗೆ ಬೇಕಾದರೂ ಕರೆದು ಕೊಂಡು ಹೋಗುತ್ತವೆ, ಸಾವಿರಾರು ಪ್ರತಿ ಪುಸ್ತಕಗಳನ್ನು ಮುದ್ರಿಸಿ ಕೊಡುತ್ತವೆ. ಈಗ ಅವನು ಕೂತಲ್ಲಿಯೇ ಸಂಗೀತವನ್ನೂ ಉಪನ್ಯಾಸಗಳನ್ನೂ ಕೇಳಬಹುದು, ನಾಟಕ ಸಿನಿಮಾಗಳನ್ನು ನೋಡಬಹುದು, ಒಂದು ಸ್ವಿಚ್ ಒತ್ತಿದರೆ ಸಾಕು ಎಲ್ಲ ಅನುಕೂಲತೆಗಳೂ ಅವನಿಗೆ ಬಂದೊದಗುತ್ತವೆ. ಸರ್ವಶಕ್ತವಾದ, ಸರ್ವಕಾರ್ಯಸಮರ್ಥವಾದ ಯಂತ್ರಮಾನವ ಜೀವನವನ್ನು ನಿಃಸಾರ್ಥಕಗೊಳಿಸುತ್ತಿದೆ—'ನೀನಾರಿಗಾದೆಯೊ ಹುಲು ಮಾನವ' ಎಂದು ಅಣಕಿಸುತ್ತಿದೆ.

ಮಾನವನ ಭೌತಿಕ ಕಾರ್ಯಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದ ಯಂತ್ರವು ಅವನ ಬೌದ್ಧಿಕ ಕ್ಷೇತ್ರವನ್ನೂ ಆಕ್ರಮಿಸುತ್ತಿದೆ. ಈಗ ಕಂಪ್ಯೂಟರ್ ಅಕೌಂಟ್ ಮಾಡುತ್ತದೆ, ಉಪಾಧ್ಯಾಯರ ಕೆಲಸ ಮಾಡುತ್ತದೆ, ಇಂಜಿನೀಯರಿಂಗ್ ಕೆಲಸ ಮಾಡುತ್ತದೆ, ರೋಗಗಳನ್ನು ಕಂಡು ಹಿಡಿಯುತ್ತದೆ(*diagonise*), ರೈಲು, ವಿಮಾನಗಳನ್ನು ಓಡಿಸುತ್ತದೆ, ಚಿತ್ರ ಬಿಡಿಸುತ್ತದೆ, ವಿಧವಿಧವಾದ ಸಂಗೀತವನ್ನು ರಚಿಸುತ್ತದೆ, ಎಲ್ಲ ವಿಧವಾದ ಮಾಹಿತಿಗಳನ್ನೂ ಸಂಗ್ರಹಿಸಿಟ್ಟುಕೊಂಡು ಮನುಷ್ಯನ ನೆನಪಿನ ಶಕ್ತಿಯನ್ನು ನೆನೆಗುದಿಗೆ ಕಳಿಸುತ್ತಿದೆ, ವಿವಾಹವನ್ನೂ ವಿವಾಹ ವಿಚ್ಛೇದವನ್ನೂ ಮಾಡಿಸುತ್ತದೆ, ಪೌರೋಹಿತ್ಯವನ್ನೂ ಮಾಡಿಸುತ್ತದೆ. ಅದು ಮಾಡದ ಕೆಲಸವಿಲ್ಲ. ಮನುಷ್ಯನ ಸೃಷ್ಟಿಯೇ ಅವನನ್ನು ಮೂಲೆಗೆ ತಳ್ಳುತ್ತಿದೆ. ಅವನು ಕೇವಲ ಸ್ವೀಕರಿಸುವವನಾಗುತ್ತಿದ್ದಾನೆ—ಮಾಡುವುದು ನೀಡುವುದು ಯಾವುದೂ ಅವನ ಪಾಲಿಗಿಲ್ಲವಾಗುತ್ತಿದೆ. ಮಾಡುವುದು ನೀಡುವುದು ಯಾವುದೂ ಇಲ್ಲದಿದ್ದರೆ ಒಂದು ವಸ್ತುವಾಗಲಿ, ವ್ಯಕ್ತಿಯಾಗಲಿ ಅರ್ಥಹೀನವಾಗುತ್ತದೆ—ಅಪ್ರಸ್ತುತವಾಗುತ್ತದೆ. ತನ್ನ ಇರುವಿಕೆಯೇ ಅಪ್ರಸ್ತುತವಾಗುವ ಈ ಸ್ಥಿತಿ ಅವನಲ್ಲಿ ತೀವ್ರ ಕಾತರತೆಯನ್ನುಂಟುಮಾಡುತ್ತದೆ.

## ಅಧ್ಯಾತ್ಮ ಹಿನ್ನೆಲೆ

ಮನುಷ್ಯನು ಬೇರೆ ಯಾವ ರೀತಿಯಲ್ಲಿಯೂ ತನ್ನ ಜೀವನಕ್ಕೆ ಅರ್ಥವನ್ನು ಕಂಡುಕೊಳ್ಳದ ಸ್ಥಿತಿ ಉಂಟಾಗುತ್ತಿದೆ. ಇಂದ್ರಿಯ ಸುಖಕ್ಕಾಗಿ ಜೀವಿಸೋಣವೆಂದರೆ ಸುಖಸಾಧನಗಳು ಜಾಸ್ತಿಯಾದಷ್ಟೂ ಸುಖ ಕಡಮೆಯಾಗುತ್ತಿದೆ. ಈಗ ಅವನು ತನ್ನ ಅರ್ಥವನ್ನು ತನ್ನ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಮಾತ್ರ ಕಂಡುಕೊಳ್ಳಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ಅದಕ್ಕಾಗಿಯೇ ಜನರು ಇಂದು ಹೆಚ್ಚು ಹೆಚ್ಚಾಗಿ ಅಧ್ಯಾತ್ಮದ ಕಡೆಗೆ ವಾಲುತ್ತಿದ್ದಾರೆ. ಯಂತ್ರ ಮನುಷ್ಯನ ಎಲ್ಲ ಕ್ಷೇತ್ರವನ್ನೂ ಆಕ್ರಮಿಸಬಹುದು, ಆದರೆ ಅವನ ಅಧ್ಯಾತ್ಮ ಕ್ಷೇತ್ರವನ್ನು ಸೂಪರ್ ಕಂಪ್ಯೂಟರ್ ಕೂಡ ಆಕ್ರಮಿಸಲಾರದು. ಏಕೆಂದರೆ ಆ ಕ್ಷೇತ್ರ ಯಾಂತ್ರಿಕತೆಯನ್ನು ಮೀರಿದುದು. ಮನುಷ್ಯನಿಗೆ ಸೇರಿದ ದೇಹ, ಇಂದ್ರಿಯ, ಮನಸ್ಸುಗಳೆಲ್ಲವೂ

ಯಾಂತ್ರಿಕವಾದವುಗಳೇ, ಆದ್ದರಿಂದ ಬೇರೆ ಯಂತ್ರ ಅವುಗಳ ಸ್ಥಾನವನ್ನು ಆಕ್ರಮಿಸಬಹುದು. ಆಧ್ಯಾತ್ಮ ಕ್ಷೇತ್ರವೊಂದೇ ಮನುಷ್ಯನ ನಿಜವಾದ ಕ್ಷೇತ್ರ, ಅವನ ಸ್ವಂತ ಸಾಮ್ರಾಜ್ಯ, ಅದನ್ನು ಯಾರೂ ಆಕ್ರಮಿಸಲಾರರು. ಅವನು ಆ ರಾಜ್ಯವನ್ನು ಬಿಟ್ಟು ದೇಹ, ಮನಸ್ಸು, ಇಂದ್ರಿಯ, ವಿಷಯ ಈ ರಾಜ್ಯಗಳನ್ನು ಆಕ್ರಮಿಸಿಕೊಂಡು ಅಲ್ಲಿ ವಿಹರಿಸುತ್ತಿದ್ದ. ಈಗ ಅವನೇ ಸೃಷ್ಟಿಸಿದ ಯಂತ್ರನಾಗರಿಕತೆ ಅವನನ್ನು ಈ ರಾಜ್ಯಗಳಿಂದ ಓಡಿಸುತ್ತಿದೆ. ಈಗವನು ಮತ್ತೆ ತನ್ನ ರಾಜ್ಯಕ್ಕೆ ಹಿಂತಿರುಗುವ ಕಾಲ ಸನ್ನಿಹಿತವಾಗುತ್ತಿದೆ—'ಮನಸ್ಸೇ, ನಿನ್ನ ಮನೆಗೆ ನೀನು ಹಿಂತಿರುಗು' ಎಂದು ಹೇಳಬೇಕಾಗಿದೆ.

### ಶ್ರೀರಾಮಕೃಷ್ಣರ ಪರಿಹಾರ

ಅದಕ್ಕಾಗಿಯೇ ಶ್ರೀರಾಮಕೃಷ್ಣರು ಹೇಳಿದರು: 'ನೀನು ಬಂದಿರುವುದು ಹಣ್ಣನ್ನು ತಿನ್ನುವುದಕ್ಕೆ, ಮರದ ಕೊಂಬೆ ಎಲೆಗಳನ್ನು ಎಣಿಸುವುದಕ್ಕಲ್ಲ' ಎಂದು. ಮರದ ಕೊಂಬೆ ಎಲೆಗಳನ್ನು ಎಣಿಸುವ ಕಾರ್ಯವನ್ನು ಈಗ ಕಂಪ್ಯೂಟರ್ ಮಾಡುತ್ತಿದ್ದು ಮನುಷ್ಯನು ಹಣ್ಣನ್ನು ತಿನ್ನಲೇಬೇಕಾದ ಪರಿಸ್ಥಿತಿಯನ್ನು ತಂದೊಡ್ಡುತ್ತಿದೆ.

ಶ್ರೀರಾಮಕೃಷ್ಣರು ಇನ್ನೊಂದು ಉದಾಹರಣೆಯನ್ನು ಕೊಡುತ್ತಿದ್ದರು. ಚಿಕ್ಕ ಮಕ್ಕಳು ಕಣ್ಣಾಮುಚ್ಚಾಲೆ ಆಟವಾಡುತ್ತಾರೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಡಕಾಡುತ್ತ ಅವರು ಅಜ್ಜಿಯನ್ನು ಮುಟ್ಟಬೇಕು. ಅಜ್ಜಿಯನ್ನು ಮುಟ್ಟಿದವರು ಗೆದ್ದಂತೆ. ಆಗ ಅವರು ಕಣ್ಣಿನ ಬಟ್ಟೆಯನ್ನು ತೆಗೆಯಬಹುದು—ಅಲ್ಲಿಗೆ ಅವರ ತಡಕಾಟ ನಿಲ್ಲುತ್ತದೆ. ಹಾಗೆಯೇ ಇಂದಿನ ಜನರು ಜೀವನದಲ್ಲಿ ಅರ್ಥವನ್ನು ಕಾಣದೆ ತಡಕಾಡುತ್ತಿರುವರು. ಆಧ್ಯಾತ್ಮಿಕ ನೆಲೆಯನ್ನು(ಅಜ್ಜಿ) ತಲುಪಿದಾಗ ಅವರ ತಡಕಾಟ ನಿಲ್ಲುತ್ತದೆ.

**ಒಂದು ದೀಪವು ಎಣ್ಣೆಯಿಲ್ಲದೆ ಉರಿಯಲಾರದು. ಹಾಗೆಯೇ ಮಾನವನು ದೇವರಿಲ್ಲದೆ ಬದುಕಲಾರನು.**

**—ಶ್ರೀರಾಮಕೃಷ್ಣ**

ಶ್ರೀರಾಮಕೃಷ್ಣರು ಇನ್ನೊಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು. ಒಂದು ಸೊನ್ನೆಗೆ ಯಾವ ಬೆಲೆಯೂ ಇಲ್ಲ. ಸೊನ್ನೆಗೆ ಎಷ್ಟು ಸೊನ್ನೆ ಸೇರಿಸಿದರೂ ಅದು ಸೊನ್ನೆಯೇ. ಆದರೆ ಸೊನ್ನೆಯ ಹಿಂದೆ ಒಂದನ್ನು ಸೇರಿಸಿದರೆ ಅದಕ್ಕೆ ಬೆಲೆ ಬರುತ್ತದೆ, ಹಾಗೂ ಸೊನ್ನೆಯನ್ನು ಸೇರಿಸಿದಷ್ಟೂ ಅದರ ಬೆಲೆ ಹೆಚ್ಚುತ್ತಾ ಹೋಗುತ್ತದೆ. ಹಾಗೆಯೇ ಜೀವನದ ಶೂನ್ಯತೆಯನ್ನೂ ಅರ್ಥಹೀನತೆಯನ್ನೂ ಹೋಗಲಾಡಿಸಬೇಕಾದರೆ ಅದಕ್ಕೆ ಒಂದನ್ನು ಅಂದರೆ ಆಧ್ಯಾತ್ಮಿಕತೆಯನ್ನು ಸೇರಿಸಬೇಕು. ಇಂದಿನ ಅರ್ಥಹೀನತೆಯಿಂದುಂಟಾಗಿರುವ ಕಾತರತೆಗೆ ಶ್ರೀರಾಮಕೃಷ್ಣರ ಪರಿಹಾರವಿದು. ಮೊದಲನೆಯ ಉದಾಹರಣೆ (ಹಣ್ಣು ತಿನ್ನುವುದು) ಆದರ್ಶವನ್ನೂ, ಎರಡನೆಯ ಉದಾಹರಣೆ ಆದರ್ಶಕ್ಕಾಗಿ ನಡೆಸುವ ಹೋರಾಟವನ್ನೂ, ಮೂರನೆಯ ಉದಾಹರಣೆ ಆದರ್ಶ ಪ್ರಾಪ್ತಿಯನ್ನೂ ಸೂಚಿಸುತ್ತದೆ. ✷

ಸ್ವಾಮಿ ಅತುಲಾನಂದರು ಅಮೆರಿಕ ದೇಶದ ಸ್ವಾಮಿಗಳು. ಅವರು ಮೊದಲ ಬಾರಿ ಭಾರತಕ್ಕೆ ಬಂದಿದ್ದಾಗ ಅಸಾಧ್ಯ ದುಃಖವನ್ನು ಅನುಭವಿಸಬೇಕಾಗಿತ್ತು. ಅವರಾಗ ಬೇಲೂರು ಮಠದಲ್ಲಿ (ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರ) ಇದ್ದರು. ಅವರು ಭಾರತದಲ್ಲಿರಲು, ಭಾರತೀಯರೊಡನೆ ಒಂದಾಗಿ ಬಾಳಲು ಬಂದಿದ್ದರು. ಆದರೆ ಭಾರತ ಅವರನ್ನು ಸ್ವೀಕರಿಸಿದಂತೆ ಅವರಿಗೆ ಅನುಭವವಾಗಲಿಲ್ಲ. ತಾನು ಪರಕೀಯನಾಗಿರುವಂತೆ, ದೇಶಭ್ರಷ್ಟನಾಗಿರುವವನಂತೆ ಅನುಭವವಾಗುತ್ತಿತ್ತು.

ಇಂತಹ ತೀವ್ರ ಸಂಕಟದ ಪರಿಸ್ಥಿತಿಯಲ್ಲಿರುವಾಗ ಒಂದು ವಿಶೇಷ ಘಟನೆ ಸಂಭವಿಸಿತು. ಒಂದು ದೊಡ್ಡ ಸಾರ್ವಜನಿಕ ಸಭೆ. ಸಭೆಯ ಮಧ್ಯೆ ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ಶಾರದಾನಂದರು ಬೆಂಚಿನ ಮೇಲೆ ಕುಳಿತಿದ್ದರು. ಇದ್ದಕ್ಕಿದ್ದಂತೆಯೆ ಸ್ವಾಮಿ ಬ್ರಹ್ಮಾನಂದರು ಸ್ವಾಮಿ ಅತುಲಾನಂದರನ್ನು ತಮ್ಮ ಹತ್ತಿರ ಕರೆದರು ಮತ್ತು ತಮ್ಮ ಪಕ್ಕದಲ್ಲಿಯೇ ಬೆಂಚಿನ ಮೇಲೆ ಕೂರಿಸಿಕೊಂಡರು. ಕೂಡಲೆ ಅತುಲಾನಂದರ ಮನಸ್ಸು ತಿಳಿಯಾಯಿತು, ಅವರ ದುಃಖ, ಪರಕೀಯಪ್ರಜ್ಞೆ ದೂರವಾಯಿತು.